# Knee ಇರಲು ಜೊತೆಯಲ್ಲಿ...

‘ನೀನಿರಲು ಜೊತೆಯಲ್ಲಿ’ ಎನ್ನುವ ಹಾಡು ಯೌವನದ ಕಾವಿಗೆ ಬಹು ಸೊಗಸು. ಜಾರು ಯೌವನದ, ಮಂಡಿ ಕಿರ್ರೆನ್ನುವ ವಯಸ್ಸಿಗೇನಿದ್ದರೂ Knee ಇರಲು ಜೊತೆಯಲ್ಲಿ... ಎನ್ನುವ ಪಲುಕೇ ಸೂಕ್ತ.

**■ ಸುಮಾ ರಮೇಶ್**



ಇವೆಲ್ಲಾ ತೀರಾ ಇತ್ತೀಚಿನ ಬೆಳವಣಿಗೆಗಳು. ಮೊದಲೆಲ್ಲಾ ಹೀಗಿರಲಿಲ್ಲ ಬಿಡಿ. ರೇಸ್ ಕುದುರೆಯಂತೆ ಕೆನೆದಾಡುತ್ತಾ ಮನೆಮಂದಿಯ ಸೇವೆಗೈಯುತ್ತಾ ಆನಂದದಿಂದ ಇದ್ದೆ. ನಾಲ್ಕಾರು ಬಗೆಯ ಭಕ್ಷ್ಯಗಳನ್ನು ಮನೆಯಲ್ಲಿರುವ ನಾಲ್ಕೇ ಮಂದಿಗೆ ಬೇಸರವಿಲ್ಲದೆ ಬೇಯಿಸಿ ಉಣಬಡಿಸುತ್ತಿದ್ದೆ. ಪ್ರಾಯ ನಲವತ್ತೈದು ದಾಟಿದ್ದೇ ಬಂತು ನೋಡಿ, ಎಲ್ಲವೂ ಅಯೋಮಯ.

ಹೋಂ ವರ್ಕ್ ಮಾಡುತ್ತಿದ್ದ ಮಕ್ಕಳು ‘ವರ್ಕ್ ಫ್ರಮ್ ಹೋಮ್’ ಮಾಡಲು ಪ್ರಾರಂಭಿಸಿದ್ದವು. ಫೇರ್ ಅಂಡ್ ಲೌವ್ಲಿ, ಸ್ಕಿನ್ ಕೇರುಗಳಿಂದ ಮಾರಿ ಬೆಳ್ಳಗಾಗದಿದ್ದರೂ ಮಂಡೆ ಮೇಲಿನ ಹೇರು ಫೇರಾದವು. ಅವನ್ನು ಮರೆಮಾಚಲು ಡೈ ಬಳಿದು ಕಪ್ಪಾಗಿಸಿದರೂ ಎರಡು ಮೂರು ದಿನಕ್ಕೆಲ್ಲಾ ಬೈತಲೆಯ ಬಳಿ ಉದ್ದಕ್ಕೂ ಮಿಣಿ ಮಿಣಿ ಎನ್ನುತ್ತಾ ಇಣುಕತೊಡಗಿದವು. ನಾನಿನ್ನೂ ಸ್ವೀಟ್ ಸಿಕ್ಸ್‌ಟೀನ್ ಎಂಬ ಗುಂಗಿನಲ್ಲೇ ಕೆನೆಯಲು ಹೋದರೆ ನರಳುತ್ತಿದ್ದ ಕೀಲು (ಕುದುರೆ)ಗಳು ಅಲ್ಲಲ್ಲೇ ಸ್ಪೀಡ್ ಬ್ರೇಕರುಗಳಂತೆ ಸ್ಟಕ್ ಆಗಿ ನಿಲ್ಲುತ್ತಿದ್ದವು. ನೀ (**knee**)ಗಳನ್ನು ಮಡಚಲು ಹೋದರೆ ಮೊಂಡು ಹಿಡಿದು ನಾದಗೈಯ್ಯುತ್ತಾ ನೀನಿನ್ನೂ ಲಡಕಿ ಅಲ್ಲ ಎಳೆ ಮುದುಕಿ... ಎಂದು ಅಲಾರ್ಮ್ ಬಾರಿಸತೊಡಗಿದವು.

ಅಂದು ಎದುರು ಮನೆಯವರು ಸತ್ಯನಾರಾಯಣ ಸ್ವಾಮಿ ಪೂಜೆಗೆಂದು ಆಹ್ವಾನಿಸಿದ್ದರು. ಬೆಳಗ್ಗೆ ಬೇಗನೆದ್ದು ಸ್ನಾನ ಮುಗಿಸಿ ಕೆಲಸಕ್ಕೆ ಕೈ ಹಚ್ಚಿದೆ. ದೇಹದ ಸಂದಿಗೊಂದಿಗಳು ನನ್ನ ವೇಗಕ್ಕೆ ಏಗಲಾರದೆ ಅರಚುತ್ತಿದ್ದರೂ ಅವುಗಳ ಬಿಕ್ಕಳಿಕೆಯ ಬೀಟ್ಸುಗಳನ್ನು ನಿರ್ಲಕ್ಷಿಸುತ್ತಾ ಮಕ್ಕಳ ಬ್ರೇಕ್ ಫಾಸ್ಟಿಗೆಂದು ಓಟ್ಸು ಸಿದ್ಧಪಡಿಸಿ, ಹರಿ ಸೇವೆಗೆಂದು ಉತ್ಸಾಹದಿಂದ ಹೊರಟೆ.

ಅಲ್ಲಿ ಕುಟುಂಬಸ್ಥರ ಪ್ರಾರ್ಥನೆ, ಪುರೋಹಿತರ ಮಂತ್ರಘೋಷದ ನಡುವೆ ಅಲ್ಲಲ್ಲೇ ಸೋಫಾ, ಚೇರು, ದಿವಾನ್ ಏರಿ ಕುಳಿತಿದ್ದ ಹೆಂಗಳೆಯರು ಹತ್ತಾರು ಬಾರಿ ಕೇಳಿ ಮನನವಾಗಿದ್ದ ಸತ್ಯನಾರಾಯಣನ ಅವೇ ಐದು ಕಥೆಗಳನ್ನು ಪುನಃ ಕೇಳಲು ಆಸಕ್ತಿ